ಗ್ರಾಮ ಪಂಚಾಯಿತಿಗಳು ಪಡಿತರ ಚೀಟಿಗೆ ಸಂಬಂಧಿಸಿದಂತೆ ಅರ್ಜಿ ಪಡೆಯುವುದು, ಪರಿಶೀಲನೆ ಮತ್ತು ವಿತರಣೆ ಮಾಡುತ್ತಿರುವುದರಿಂದ ಇತರ ವಿವಿಧ ಅಭಿವೃದ್ಧಿ ಕೆಲಸಗಳಿಗೆ ನೀಡುತ್ತಿರುವ ಗಮನ ಕಡಿಮೆಯಾಗಿರುವುದು ಗಮನಕ್ಕೆ ಬಂದಿದೆ.
(ಇ) ಪಡಿತರ ಚೀಟಿಯ ವಿತರಣಾ ವ್ಯವಸ್ಥೆಯನ್ನು ನ್ಯಾಯಬೆಲೆ ಅಂಗಡಿಗೆ ವಹಿಸಿಕೊಡುವುದರಿಂದ ಪಡಿತರ ಚೀಟಿಗಳ ದುರುಪಯೋಗವಾಗುವ ಹೆಚ್ಚು ಸಾಧ್ಯತೆ ಇದೆ. ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಬಲ ಹೆಚ್ಚಿಸಬಹುದಾಗಿರುತ್ತದೆ.
(ಈ) ಪಡಿತರ ಚೀಟಿ ತಯಾರಿಕೆಯಿಂದಾಗಿ ಗ್ರಾಮ ಪಂಚಾಯತಿಗಳಲ್ಲಿರು ವಂತಹ ದೂರವಾಣಿ ಬಿಲ್ಲು ಜಾಸ್ತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

**ಶ್ರೀಮತಿ ಶಕುಂತಲಾ ಟಿ. ಶೆಟ್ಟಿ :** ಉತ್ತರ ಬಂದಿದೆ. ಉತ್ತರ ಸರಿಯಾಗಿದೆ. ಆದರೆ, ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಹೆಚ್ಚಿಸಬಹುದಾಗಿರುತ್ತದೆ ಎಂದಿದೆ. ಯಾರು ಎಂದು ಗೊತ್ತಾಗಲಿಲ್ಲ ? ಸಿಬ್ಬಂದಿಗಳನ್ನು ಯಾರು ಹೆಚ್ಚಿಸಬೇಕು ? ಪಂಚಾಯಿತಿಯವರೇ ? ಇಲಾಖೆಯವರೆ ? ಇ–ಸ್ವತ್ತು, 9, 11, NREG, ಸಕಾಲ, ಪಡಿತರ, ವಸತಿ, data entry ಎಲ್ಲವನ್ನೂ ಒಂದಿಬ್ಬರೇ ಮಾಡುವುದಾದರೆ ಅಲ್ಲಿ ಬೇರೆ ಕೆಲಸ ಆಗುತ್ತಿಲ್ಲ. ಈಗ ಸಿಬ್ಬಂದಿ ಕೊರತೆ ಇದೆ.

**ಅಧ್ಯಕ್ಷರು :** ನಿಮ್ಮ ಪ್ರಶ್ನೆ ಏನು ಹೇಳಿ.

**ಶ್ರೀಮತಿ ಶಕುಂತಲಾ ಟಿ. ಶೆಟ್ಟಿ :**ಸಿಬ್ಬಂದಿಯನ್ನು ಯಾರು ನೇಮಕ ಮಾಡುವುದು ?

**ಶ್ರೀ ಹೆಚ್.ಕೆ. ಪಾಟೀಲ್ :** ಸಿಬ್ಬಂದಿ ಹೆಚ್ಚು ಮಾಡುವ ಸಲುವಾಗಿ ಇಲಾಖೆ ಈಗಾಗಲೇ ಕಾರ್ಯಕ್ರಮವನ್ನು ರೂಪಿಸುತ್ತಿದೆ. ಹೆಚ್ಚಿನ PDO ಗಳನ್ನು ನೇಮಕ ಮಾಡಿಕೊಳ್ಳತಕ್ಕಂಥ ಪ್ರಕ್ರಿಯೆ ನಡೆದಿದೆ. Data Entry Operator ಗಳನ್ನು ಯಾವ ರೀತಿಯಾಗಿ ನೇಮಕ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಚಿಂತನೆ ನಡೆದಿದೆ. ಸಾಕಷ್ಟು ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕಾದಂಥ ಅವಶ್ಯಕತೆ ಇದ್ದು, ಅದಕ್ಕೆ ಏನೇನು ಪ್ರಕ್ರಿಯೆ ಪ್ರಾರಂಭ ಮಾಡಬೇಕೋ ಮಾಡುತ್ತಿದ್ದೇವೆ.

**ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳ ಭರ್ತಿ**

**34(278) ಶ್ರೀ ತುಕಾರಾಮ್.ಈ (ಸಂಡೂರು) :–** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–
(ಅ) ಸಂಡೂರು ಮತಕ್ಷೇತ್ರದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಪ್ರಸ್ತುತ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ; (ವಿಷಯವಾರು ಮಾಹಿತಿ ಒದಗಿಸುವುದು)

(ಆ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

**ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

(ಅ)

| | ಪ್ರಾಥಮಿಕ | | ಪ್ರೌಢ |
|---|---|---|---|
| 1. | ಮುಖ್ಯ ಗುರುಗಳು 34 | 1. | ಪಿ.ಸಿ.ಎಂ–06 |
| 2. | ಪದವೀಧರ ಮುಖ್ಯ ಗುರುಗಳು –05 | 2. | ಸಿ.ಬಿ.ಝಡ್– 03 |
| 3. | ಉರ್ದು ಮುಖ್ಯ ಗುರುಗಳು –02 | 3. | ಉರ್ದು (ಕಲಾ) –01 |
| 4. | ಕನ್ನಡ –128 | 4. | ವೃತ್ತಿ ಶಿಕ್ಷಕರು– 08 |
| 5. | ಆಂಗ್ಲ– 27 | | |
| 6. | ವಿಜ್ಞಾನ –11 | | |
| 7. | ಹಿಂದಿ –12 | | |
| 8. | ಉರ್ದು –08 | | |
| 9. | ತೆಲುಗು –03 | | |
| 10. | ದೈಹಿಕ –08 | | |
| 11. | ಸಂಗೀತ –01 | | |
| | **ಒಟ್ಟು –239** | | **ಒಟ್ಟು –18** |

(ಆ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡಲು ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (TET) ನಡೆಸಲಾಗಿದೆ. ಆದಾಗ್ಯೂ, ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅಡಚಣೆ ಆಗಬಾರದೆನ್ನುವ ದೃಷ್ಟಿಯಿಂದ ನೇಮಕಾತಿ ಮಾಡುವವರೆಗೆ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 9,405 ಮತ್ತು ಸರ್ಕಾರಿ ಪ್ರೌಢ ಶಾಲೆಗಳಿಗೆ 1,137 ಅತಿಥಿ ಶಿಕ್ಷಕರನ್ನು ನೇಮಿಕ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಇಡಿ 194 ಎಸ್‌ಟಿಬಿ 2013; ದಿನಾಂಕ:13–06–2014 ರಲ್ಲಿ ಅನುಮತಿ ನೀಡಲಾಗಿರುತ್ತದ ಹಾಗೂ ಜೂನ್– 2014ರ ನಂತರ ನಿವೃತ್ತರಾಗಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರನ್ನು

ಖಾಲಿ ಹುದ್ದೆಗಳನ್ನು ಭರ್ತಿ ಮಾಡುವವರೆಗೆ ಸೇವೆಯಲ್ಲಿ ಮುಂದುವರೆಸಲು ಕ್ರಮವಹಿಸಲಾಗುತ್ತಿದೆ.

**ಶ್ರೀ ಈ. ತುಕಾರಾಂ :** ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಅಧ್ಯಕ್ಷರೆ ತಾವು ನೋಡಿ ಎಂಥ ಪರಿಸ್ಥಿತಿ ಎಂದರೆ ಆರು ವರ್ಷಗಳಾದರೂ ಇವತ್ತಿನವರೆವಿಗೂ ಶಿಕ್ಷಕರ ನೇಮಕಾತಿಯಾಗಿಲ್ಲ. ಬರೀ ಅತಿಥಿ ಶಿಕ್ಷಕರ ಮೇಲೆ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳು ನಡೆಯುತ್ತಿವೆ. ಡಾ:ನಂಜುಂಡಪ್ಪನವರ ವರದಿಯ ಪ್ರಕಾರ ನನ್ನ ತಾಲ್ಲೂಕು ಅತ್ಯಂತ ಹಿಂದುಳಿದ ಪ್ರದೇಶ ಮತ್ತು Article 371 (J) ನ ವ್ಯಾಪ್ತಿಯೊಳಗೆ ಬರುತ್ತದೆ. ಮಾನ್ಯ ಮಂತ್ರಿಗಳು ಅತಿಥಿ ಶಿಕ್ಷಕರನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಗಮನಕ್ಕೆ ಈ ವಿಷಯ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ತರಹ ಅತಿಥಿ ಶಿಕ್ಷಕರನ್ನು ಕೊಟ್ಟಿರುವುದರಿಂದ ಏನಾಗಿದೆ ಎಂದರೆ, ಮಕ್ಕಳಿಗೆ quality of education ಸಿಗುತ್ತಿಲ್ಲ.

**ಅಧ್ಯಕ್ಷರು :** ಈಗ ಏನು ಮಾಡಬೇಕೆಂದು ಹೇಳಿ.

**ಶ್ರೀ ಈ. ತುಕಾರಾಂ :** ನನ್ನ ಮನವಿ ಏನೆಂದರೆ, ಈಗೇನು ಶಿಕ್ಷಕರ ನೇಮಕಾತಿ ಇದೆಯೆಲ್ಲಾ academic year start..

**ಅಧ್ಯಕ್ಷರು :** ಮಾನ್ಯ ತುಕರಾಂರವರೆ, ದಯವಿಟ್ಟು ಇಲ್ಲಿ ಕೇಳಿ, ನಿಮ್ಮ ಉದ್ದೇಶ ಏನು ? ಸರ್ಕಾರ ಏನು ಮಾಡಬೇಕು ಅದನ್ನು ಕೇಳಿ.

**ಶ್ರೀ ಈ. ತುಕಾರಾಂ :** ನನ್ನ ಮನವಿ ಇಷ್ಟೆ. Academic year ಯಾವಾಗ ಶುರುವಾಗುತ್ತದೆ ಈ formalities ಏನು ಇದೆ, TET exam ಬರೆದಿದ್ದಾರೆ, ಎಷ್ಟೆಷ್ಟು ಗಲಭೆ ಗೊಂದಲಗಳಾಗಿವೆ ಎಂದು ನೋಡಿದ್ದೀರಿ. ಹೀಗಾಗಿ ಆದಷ್ಟು regular ನೇಮಕಾತಿ ಮಾಡಿ ಕೊಡಬೇಕೆಂದು ಕೇಳುತ್ತೇನೆ.

**ಅಧ್ಯಕ್ಷರು :** ಆಯಿತು. ಅಷ್ಟೇ ಕೇಳಿ, ಈಗ ನೀವು ಉತ್ತರ ಹೇಳಿ.

**ಶ್ರೀ ಕಿಮ್ಮನೆ ರತ್ನಾಕರ್ :** ಮಾನ್ಯ ಗೌರವಾನ್ವಿತ ಸದಸ್ಯರು ಕೇಳಿದ ಪ್ರಶ್ನೆಗೆ ನಾವು ಉತ್ತರ ಒದಗಿಸಿದ್ದೇವೆ. ಸುಮಾರು 28 ಸಾವಿರ ಜನ ಶಿಕ್ಷಕರ ಕೊರತೆ ನಮ್ಮಇಲಾಖೆಯಲ್ಲಿದೆ. ಅದರೊಳಗೆ ಈಗಾಗಲೇ 11 ಸಾವಿರ ಶಿಕ್ಷಕರನ್ನು ತುಂಬಿಕೊಳ್ಳುವುದಕ್ಕಾಗಿ..

**ಅಧ್ಯಕ್ಷರು :** ಅವರು ತಮ್ಮ ಕ್ಷೇತ್ರದ ಬಗ್ಗೆ ಕೇಳಿದ್ದಾರೆ ನೀವು ಇಡೀ ರಾಜ್ಯಕ್ಕೆ ಹೋದಿರಿ. ಅದನ್ನು ಯಾವಾಗ ಮಾಡಿ ಕೊಡುತ್ತೀರಿ ಎನ್ನುವುದನ್ನು ಹೇಳಿದರೆ ಆಯಿತು.

**ಶ್ರೀ ಕಿಮ್ಮನೆ ರತ್ನಾಕರ್ :** ಅದನ್ನೇ ಹೇಳುತ್ತಿದ್ದೇನೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದಕ್ಕೆ ನಾನು explain ಮಾಡುತ್ತಿದ್ದೇನೆ. ಹೊಸದಾಗಿ 11 ಸಾವಿರ ಶಿಕ್ಷಕರನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಅನುಮತಿ ಬಂದಿದೆ. ಇನ್ನು 5 ಸಾವಿರ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮೌಖಿಕ ಆದೇಶ ನೀಡಿದ್ದಾರೆ. ಹೆಚ್ಚು ಕಡಿಮೆ ಈ ಅಕ್ಟೋಬರ್ ಅಂತ್ಯದೊಳಗೆ 16,200 ಜನ ಶಿಕ್ಷಕರನ್ನು ನೇಮಕ ಮಾಡುತ್ತೇವೆ. ತಾತ್ಕಾಲಿಕ ವ್ಯವಸ್ಥೆ ಕಳೆದ ವರ್ಷದಲ್ಲಿ ಆಗಿರಲಿಲ್ಲ. ಈಗ 14 ರಿಂದ 15 ಸಾವಿರ ತಾತ್ಕಾಲಿಕ ಶಿಕ್ಷಕರ ನೇಮಕ ಮಾಡುತ್ತೇವೆ. ಅದರೊಳಗೆ ಕಳೆದ ವರ್ಷ ಏನು ವ್ಯವಸ್ಥೆ ಮಾಡಿದ್ದೇವೆ ಅದನ್ನು ಮುಂದುವರಿಸುವುದಕ್ಕೆ ನಾವು ಮಾಡುತ್ತಿದ್ದೇವೆ.

**ನರಗುಂದದಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭ**

**35(346) ಶ್ರೀ ಯಾವಗಲ್ ಬಿ.ಆರ್. (ನರಗುಂದ) :–** ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಪ್ರಸಕ್ತ ಸಾಲಿನಲ್ಲಿ ಗದಗ ಜಿಲ್ಲೆ ನರಗುಂದ ಪಟ್ಟಣದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು;

(ಇ) ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಅವಶ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ವೆಚ್ಚವಾಗುವ ಮೊತ್ತವೆಷ್ಟು ?

**ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)**

(ಅ) ಇದೆ

(ಆ) ವಿದ್ಯಾರ್ಥಿಗಳ ಸಂಖ್ಯೆ, ಜಮೀನಿನ ಲಭ್ಯತೆ, ಹಣಕಾಸಿನ ಅಗತ್ಯತೆ ಹಾಗೂ ಕೇಂದ್ರ ಸರ್ಕಾರದ(ಎ.ಐ.ಸಿ.ಟಿ.ಇ) ಅನುಮತಿ ಅನುಸಾರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.